## ಉಳಿವಿಗಾಗಿ ಊರು

ಜುಲೈ 30ರ ಸಂಚಿಕೆಯಲ್ಲಿ ಶಿವಾನಂದ ಕಳವೆ ಬರೆದ ಮುಖಪುಟ ಲೇಖನ 'ಉಳಿವಿಗಾಗಿ ಊರು' ಮನ ಮನಸ್ಪರ್ಶಿಯಾಗಿದೆ. ಹೊಟ್ಟೆ ಹೊರೆಯಲು ನಗರ ಸೇರಿದವರು, ಈಗ ಜೀವಕ್ಕಾಗಿ ಮರಳಿ ಊರಿಗೆ ಹಿಂದಿರುಗುತ್ತಿದ್ದಾರೆ. ಅವರಲ್ಲಿರುವ ಆತಂಕದ ಸ್ಥಿತಿಯನ್ನು ನೆನೆದರೆ ಬೇಸರವಾಗುವುದು. ಪ್ರಸ್ತುತ ಹಳ್ಳಿಯ ಬದುಕೂ ಅವರಿಗೆ ಕಾಯಕ ನೀಡಿ ಉದರ ಪೋಷಕವಾಗುವುದೆಂಬ ಭರವಸೆಯೂ ಇಲ್ಲ. ಕೊರೊನಾ ಮುಗಿದ ನಂತರ ಮತ್ತೆ ಅವರು ನಗರಕ್ಕೆ ಹಿಂದಿರುಗಿದರೂ ಆಶ್ಚರ್ಯವೇನಿಲ್ಲ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

ಲೇಖನ ಸದ್ಯದ ಗ್ರಾಮೀಣ ಹಾಗೂ ನಗರ ಪ್ರದೇಶದ ತಲ್ಲಣವನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. 'ಕೆಟ್ಟು ಪಟ್ಟಣ ಸೇರು' ಎಂಬ ಗಾದೆಗೆ ವಿರೋಧವಾಗಿ ನಗರದ ಜನತೆ ಹಳ್ಳಿಗಳತ್ತ ಮುಖಮಾಡಿರುವುದು ಪ್ರಕೃತಿಯು ತಂದಿರುವ ಬದಲಾವಣೆ ಎನ್ನದೆ ವಿಧಿಯಿಲ್ಲ. ವ್ಯಾಪಾರದಲ್ಲಿ ಹಣ ಸಂಪಾದನೆ ಮಾಡಿ ಕೊರೊನಾ ಕಂಟಕದಿಂದ ಅಂಗಡಿಗಳು ಬಾಗಿಲು ಮುಚ್ಚುವ ಹಂತದಲ್ಲಿ ವ್ಯಾಪಾರಿಗಳು ಗ್ರಾಮೀಣ ಪ್ರದೇಶಗಳಲ್ಲಿ ಜಮೀನುಗಳ ಹುಡುಕಾಟದಲ್ಲಿ ತೊಡಗಿದ್ದಾರೆ.

–ಬಚ್ಚೇಗೌಡ

ಬಡವರಿಗೆ ಹೊಟ್ಟೆಯ ಪಾಡಿಗಾಗಿ ಮತ್ತೆ ನಗರಗಳಿಗೆ ವಲಸೆ ಹೋಗಿ ಬದುಕು ಕಟ್ಟಿಕೊಳ್ಳುವ ಅನಿವಾರ್ಯತೆ ಇರಬಹುದು. ಆದರೆ ಉಳ್ಳವರು, ಮಹತ್ವಾಕಾಂಕ್ಷೆಯ ಬೆನ್ನುಬಿದ್ದು ತಮ್ಮ ಮಕ್ಕಳು ಸಾಫ್ಟ್‌ವೇರ್ ಎಂಜಿನಿಯರ್ ಆಗಲೇಬೇಕು, ಬೆಂಗಳೂರಿನಲ್ಲಿ ಪಾಶ್ ಅಪಾರ್ಟ್‌ಮೆಂಟ್, ಕಾರ್ ತೆಗೆದುಕೊಳ್ಳಬೇಕು ಎಂದು ಕನಸು ಕಂಡು ಮಕ್ಕಳನ್ನು ನಗರಕ್ಕೆ ಅಟ್ಟಿದವರು. ಅಂಥವರಿಗೆ ಮತ್ತೆ ಹಳ್ಳಿಗೆ ಮರಳಲು ನೈತಿಕ ಅಧಿಕಾರ ಇದೆಯೇ?

–ಶೈಲಾ ಜೋಷಿ



ಹಳ್ಳಿಯ ಜೀವನ, ನಗರಕ್ಕೆ ಹೋಲಿಸಿದರೆ ಒತ್ತಡರಹಿತ ಜೀವನವೆಂಬುದು ಸತ್ಯ. ನಗರ ಜೀವನ 2000 ಇಸವಿಯಿಂದ ಈಚೆಗೆ ಆಡಂಬರ, ಅನಗತ್ಯ ಖರ್ಚಿನ, ದುಂದುಜೀವನವಾಗಿ ಮಾರ್ಪಟ್ಟಿದೆ. ಇದಕ್ಕೆಲ್ಲ ಈಗ ಕೊರೊನಾ ತಡೆಯೊಡ್ಡಿದೆ. ನಗರಗಳ ಮತ್ತು ಹಳ್ಳಿಗಳ ಅಭಿವೃದ್ಧಿಯ ಸಮತೋಲನ ಸಾಧಿಸಿದರೆ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು.

–ಸುಬ್ರಹ್ಮಣ್ಯ ಕಲ್ಲೂರ

ಇವತ್ತಿನ ಸಂದರ್ಭಕ್ಕೆ ಯಾವ ಶೈಕ್ಷಣಿಕ ಸಂಸ್ಥೆಗಳೂ ಕಲಿಸಲಾಗದ ಪಾಠವನ್ನು ಕೊರೊನಾ ಮನುಷ್ಯನಿಗೆ ಕಲಿಸಿದೆ. ದೇಶದ, ಪ್ರಪಂಚದ ಆಗುಹೋಗುಗಳನ್ನು ಚೆನ್ನಾಗಿ ಅಭ್ಯಸಿಸಿರುವ ಹಾಗೂ ಸೂಕ್ಷ್ಮಮತಿಗಳಾಗಿರುವ ಶಿವಾನಂದ ಕಳವೆ ಅವರು ಹಳ್ಳಿ ಬದುಕಿನ ಸ್ಥಿತಿಗತಿಗಳನ್ನು ಕಟ್ಟಿಕೊಟ್ಟಿದ್ದು ಸಮಯೋಚಿತ. ಎಲ್ಲರ ಕಣ್ತೆರೆಸುವ ಮಾರ್ಮಿಕವಾದ ಲೇಖನ.

–ಜನ್ನಪ್ಪ ಹೊನ್ನಪ್ಪ, ಸಾವಿತ್ರಿ ಬೇಲೆ

ಬೆಂಗಳೂರಿನಿಂದ ವಾಪಸ್ ಊರಿಗೆ ಹೋಗುತ್ತಿರುವವರ ಪರಿಸ್ಥಿತಿ ತುಂಬಾ ಗಾಬರಿ ಹುಟ್ಟಿಸುತ್ತದೆ. ಜನರೆಲ್ಲ ನಿರುದ್ಯೋಗಿಗಳಾಗುತ್ತಿದ್ದಾರೆ. ಮುಂದಿನ ದಾರಿ ಕಾಣಿಸುತ್ತಿಲ್ಲ.

–ಸೋಮಣ್ಣ ಎಸ್.ಡಿ. ಬೆಂಗಳೂರು

ಜುಲೈ 30ರ ಸುಧಾ ವೈವಿಧ್ಯಮಯವಾಗಿತ್ತು. 'ಉಳಿವಿಗಾಗಿ ಊರು' ಲೇಖನ ಚಿಂತನಾರ್ಹ. ಕನ್ನಡ ರಂಗಭೂಮಿಯ ಸುಭದ್ರಮ್ಮ ಮನ್ಸೂರ್ ಅವರ ಬಗೆಗಿನ 'ಸವ್ಯಸಾಚಿ ಸುಭದ್ರಕ್ಕ' ಲೇಖನ ಅವರಿಗೆ ಸಲ್ಲಿಸಿದ ಶ್ರದ್ಧಾಂಜಲಿ. ಅಕ್ಕನ ವಚನಗಳನ್ನು ಅವರ ಕಂಠದಲ್ಲಿ ಕೇಳುವುದೇ ಒಂದು ಸೊಗಸು.

–ಬಿಲ್ಲೇಶ್ವರ ಅಚ್ಚು, ಹುಂಚ

## ಸವ್ಯಸಾಚಿ ಸುಭದ್ರಕ್ಕ

ರಂಗಭೂಮಿಯ ದೈತ್ಯಪ್ರತಿಭೆ 'ಸವ್ಯಸಾಚಿ ಸುಭದ್ರಕ್ಕ' ಕುರಿತು ಮತ್ತೊಬ್ಬ ಪ್ರತಿಭಾವಂತ ಕೀರ್ತನಕಾರ ಲಕ್ಷ್ಮಣದಾಸ್ (ಜುಲೈ 30) ಆಪ್ತವಾಗಿ ಬರೆದಿದ್ದಾರೆ. ಸುಭದ್ರಮ್ಮ ವೃತ್ತಿ, ಹವ್ಯಾಸಿ, ಗ್ರಾಮೀಣ ನಾಟಕಗಳ ಕಲಾವಿದೆ ಎಂದು ಸರಿಯಾಗೇ ಹೇಳಿದ್ದಾರೆ. ಆದರೆ ಬಹಳಜನ ಅವರನ್ನು 'ವೃತ್ತಿರಂಗಭೂಮಿ ಕಲಾವಿದೆ'ಯೆಂದು ಕರೆಯುತ್ತಾರೆ. ವೃತ್ತಿರಂಗಭೂಮಿಯಲ್ಲಿ ಅವರು ನಟಿಸಿದ್ದು 17 ವರ್ಷ. ಉಳಿದ 50 ವರ್ಷ ಹವ್ಯಾಸಿಗಳ ಜೊತೆ. ಹಾಗಾಗಿ 'ವೃತ್ತಿ ರಂಗಕಲಾವಿದೆ' ಎಂದು ಕರೆಯಬಹುದು.

ಸುಭದ್ರಮ್ಮ ಬಗ್ಗೆ ನಾನು ಬರೆದ ಪುಸ್ತಕ ಹಂಪಿ ಕನ್ನಡ ವಿವಿಯಲ್ಲಿ ಲಭ್ಯ. ಅವರ ಹಾಡುಗಳ ಧ್ವನಿಮುದ್ರಣ ರಂಗ ತೋರಣದಲ್ಲಿ (9513313113) ಲಭ್ಯ.

–ಗುಡಿಹಳ್ಳಿ ನಾಗರಾಜ, ಬೆಂಗಳೂರು.

ಉತ್ತಮನುಡಿನಮನ. ಕಲೆಗಾಗಿ ಬಾಳಿದ ಅವರು ಹಣವೇ ಪ್ರಧಾನವಾಗಿರಬಾರದು ಎಂಬ ತಮ್ಮ ನಡೆಯಿಂದ ಇಂದಿನವರಿಗೆ ಮಾದರಿಯಾಗಿರುವುದು ಗಮನಾರ್ಹ ಅಂಶ.

–ಕೆ.ವಿ. ಸೀತಾರಾಮ್, ಮಂಗಳೂರು

## ಚಂದದ ಪದ್ಯ

ಜು. 30ರ ಸಂಚಿಕೆಯ 'ಎಳೆಯರ ಅಂಗಳ'ದಲ್ಲಿ ಕೆ.ಬಿ. ರಂಗಸ್ವಾಮಿ ಬರೆದ ಶಿಶುಕಾವ್ಯ 'ಪಾಪುವಿನ ಅಳು' ಚೆನ್ನಾಗಿತ್ತು. ಇಂತಹ ಕವಿತೆಗಳು ಹೆಚ್ಚು ಹೆಚ್ಚು ಪ್ರಕಟಗೊಳ್ಳಲಿ; ಮಕ್ಕಳನ್ನು ರಂಜಿಸಲಿ.

–ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ

## ಹಸಿವು

ಜುಲೈ 23ರ ಸಂಚಿಕೆಯಲ್ಲಿ ಪ್ರಕಟವಾದ ಹನುಮಂತ ಹಾಲಿಗೇರಿಯವರ ಕಥೆ 'ಹಸಿವು' ಸಮಾಜದ ಮನಃಸ್ಥಿತಿಯನ್ನು ಬಿಂಬಿಸುವುದರ ಜೊತೆಗೆ ಬಸವಣ್ಣನವರ 'ಲೋಕದ ಡೊಂಕ ನೀವೇಕೆ ತಿದ್ದುವಿರಿ' ವಚನ ನೆನಪಿಸಿತು. ಬಾದಲ್ ನಂಜುಂಡಸ್ವಾಮಿ ಅವರ ಕಲೆ ಕೂಡ ಮನಮುಟ್ಟುವಂತೆ ಇತ್ತು.

–ಜಗದೀಶ ಬಿ. ಹೊಸೂರು, ಮೈಸೂರು

## ಗ್ರಾಮ ವೃದ್ಧಾಶ್ರಮ ಆಗುತ್ತಿರಲಿಲ್ಲ

ಜುಲೈ 30 ರ ಸಂಚಿಕೆಯಲ್ಲಿ ರಘುನಾಥ ಚ .ಹ ಅವರು 'ನಿಮ್ಮೊಡನೆ' ಪುಟದಲ್ಲಿ ಬರೆದಿರುವ ಲೇಖನ ಸಕಾಲಿಕವಾಗಿದೆ. ಸ್ವಾತಂತ್ರ್ಯದ ನಂತರ ನೆಹರೂರವರ ಕೈಗಾರಿಕಾ ನೀತಿಯ ಜೊತೆಜೊತೆಗೆ ಗಾಂಧೀಜಿಯವರ ಗ್ರಾಮ ಸ್ವಾವಲಂಬನೆಯಂತಹ ಯೋಜನೆಗಳತ್ತಲೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೆ, ಯುವಜನತೆ ಕೆಲಸವನ್ನು ಅರಸುತ್ತಾ ನಗರಗಳ ಕಡೆ ಮುಖಮಾಡಿ, ಹಳ್ಳಿಗಳನ್ನು ವೃದ್ಧಾಶ್ರಮಗಳಾಗುತ್ತಿರಲಿಲ್ಲ.

–ಪುಷ್ಪಾಶ್ರೀರಾಮ್, ಬೆಂಗಳೂರು

## ಕಥೆ ಮತ್ತು ಕಾವ್ಯ ಸ್ಪರ್ಧೆ

'ಸಂಗಾತ' ಸಾಹಿತ್ಯ ಪತ್ರಿಕೆ, ಪಿ.ಪಿ. ಗೆಳೆಯರ ಬಳಗದ ಸಹಯೋಗದಲ್ಲಿ 'ಸಂಗಾತ ಕಥಾಸ್ಪರ್ಧೆ' ಮತ್ತು 'ಚಿ. ಶ್ರೀನಿವಾಸರಾಜು ಕಾವ್ಯಸ್ಪರ್ಧೆ' ಆಯೋಜಿಸಿದೆ. ವಯೋಮಿತಿ: ಕಥಾಸ್ಪರ್ಧೆಗೆ 35, ಕಾವ್ಯಸ್ಪರ್ಧೆಗೆ 40. ಜನ್ಮದಿನಾಂಕ ದೃಢೀಕರಣ ಕಡ್ಡಾಯ. ಪ್ರಥಮ ಬಹುಮಾನ (ಕಥೆ) 10000 ಮತ್ತು ಒಪ್ಪಿತ ಎರಡು ಕಥೆಗಳಿಗೆ 5000. ಆಯ್ಕೆಯಾದ ಕವನ ಸಂಕಲನವನ್ನು ಸಂಗಾತ, ಪಿ.ಪಿ. ಗೆಳೆಯರ ಬಳಗದ ಸಹಯೋಗದೊಂದಿಗೆ ಪ್ರಕಟಿಸಲಿದೆ. ಕಥೆಯನ್ನು ಇ ಮೇಲ್ ಮೂಲಕವೇ ಮತ್ತು ಕವನಸಂಕಲನ ಹಸ್ತಪ್ರತಿಯನ್ನು ಅಂಚೆ ಮೂಲಕವೇ ಕಳುಹಿಸಬೇಕು. ಕೊನೆ ದಿನಾಂಕ: ಕವನಸಂಕಲನಕ್ಕೆ ಆಗಸ್ಟ್ 25, ಕಥೆಗೆ ಆ. 31.

ವಿಳಾಸ: ಟಿ.ಎಸ್. ಗೊರವರ, ಸಂಪಾದಕ, ಸಂಗಾತ ಸಾಹಿತ್ಯ ಪತ್ರಿಕೆ, ಕೆಯುಡಿ ರಸ್ತೆ, ಜಯನಗರ ಕ್ರಾಸ್, ಸಪ್ತಾಪುರ, ಧಾರವಾಡ –580 001. ಮಿಂಚಂಚೆ: sangaata2018@gmail.com ದೂರವಾಣಿ: 3417 57653.